ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ವಕೀಲರಿಂದಃ-

ನಮ್ಮ ತಾತ ಬರೆದಿರುವುದು ಒಂದೇ ಪಂಚಾಯಿತಿ ಪಾರಿಕತ್ತು ಮತ್ತು ಒಂದೇ ಪ್ರತಿ ಇರುತ್ತದೆ. ಸದರಿ ಪಂಚಾಯಿತಿ ಪಾರಿಕತ್ ನಮ್ಮ ತಾತ ಕೈಯಲ್ಲಿ ಇತ್ತು ಅವರು ತೀರಿಕೊಂಡಾಗ ನಮ್ಮ ಚಿಕ್ಕಪ್ಪನ ಕೈಗೆ ಕೊಟ್ಟರು. ನಮ್ಮ ಚಿಕ್ಕಪ್ಪನವರ ಹೆಸರು ಕೆಂಪಣ್ಣ. ಪಾಲುಪಾರಿಕತ್ತನ್ನು ನಮ್ಮ ತಾತ ನಮ್ಮ ಚಿಕ್ಕಪ್ಪನ ಕೈ ಕೊಟ್ಟಿದ್ದರು ಎಂದು ಬರೆಸಿದ್ದೇನೆ. ಪಂಚಾಯಿತಿ ಪರಿಕತ್ ಬರದಾಗ ಪ್ರತಿಯೊಬ್ಬರಿಗೂ ಒಂದೊಂದು ಪ್ರತಿ ಕೊಡುವ ಪದ್ದತಿ ಇದೆ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಸಲ್ಲಿಸಿರುವ ದಾವೆಯು ಕಾಲಿಮಿತಿಯಾಳಗೆ ಇರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ- ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ನಿವೇದಿತ ಟಿ.ಎಂ.)
1ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.